## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 04
2. ಮಾನ್ಯ ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 27.01.2026
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆ ಬಿ.ಎಸ್.ಎಸ್.ಕೆ ಸಕ್ಕರೆ ಕಾರ್ಖಾನೆ, ಪ್ರಾರಂಭಗೊಳ್ಳದಿರುವುದರಿಂದ ಜಿಲ್ಲೆಯ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಹುಮನಾಬಾದ್, ಬೀದರ್ ಜಿಲ್ಲೆ - ಈ ಕಾರ್ಖಾನೆಯು ದುಡಿಯುವ ಬಂಡವಾಳದ ಕೊರತೆ ಮತ್ತು ಇತರ ಆಡಳಿತಾತ್ಮಕ ಕಾರಣಗಳಿಂದಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ರೈತರ ಕಬ್ಬನ್ನು ನೆರೆಯ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಲು ಬೀದರ್ ಜಿಲ್ಲಾಡಳಿತವು ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ. |
| (ಆ) | ಸಕ್ಕರೆ ಕಾರ್ಖಾನೆಗೆ ಸರ್ಕಾರದ ವತಿಯಿಂದ ಆರ್ಥಿಕ ನೆರವನ್ನು ಪಡೆದು ಸಕ್ಕರೆ ಕಾರ್ಖಾನೆ ಪ್ರಾರಂಭ ಮಾಡಬಹುದಲ್ಲವೇ; | ಆರ್ಥಿಕ ಸಂಕಷ್ಟ ಮತ್ತು ಇನ್ನಿತರೆ ಕಾರಣಗಳಿಂದ ಸ್ಥಗಿತಗೊಂಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳಗಾರರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ. ಅದರಂತೆ, ಆರ್ಥಿಕ ಸಂಕಷ್ಟ ಮತ್ತು ಇನ್ನಿತರೆ ಕಾರಣಗಳಿಂದ ಸ್ಥಗಿತಗೊಂಡಿದ್ದ ಒಟ್ಟು 10 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಲಾಗಿದೆ. |
| (ಇ) | ಸಕ್ಕರೆ ಕಾರ್ಖಾನೆ ಗುತ್ತಿಗೆ ನೀಡುವ ಕುರಿತು ಸರ್ಕಾರ ಕೈಗೊಂಡ ಕ್ರಮವೇನು; (ಮಾಹಿತಿ ನೀಡುವುದು) | ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ 2022-23ನೇ ಹಂಗಾಮಿನಿಂದ 40 ವರ್ಷಗಳ ಅವಧಿಗೆ LROT ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ ಖಾಸಗಿಯವರಿಗೆ ಗುತ್ತಿಗೆ ನೀಡಲು ದಿನಾಂಕ:10.01.2023 ರಂದು ಅನುಮತಿಯನ್ನು ನೀಡಲಾಗಿತ್ತು. ಆದೇಶದ ಪ್ರತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. ಅದರಂತೆ, ಗುತ್ತಿಗೆ ನೀಡುವ ಸಂಬಂಧ ದಿನಾಂಕ: 17.02.2023 ರಂದು ದಿನಪತ್ರಿಕೆಗಳಲ್ಲಿ ಟೆಂಡರ್ ಪ್ರಕಟಣೆ ನೀಡಲಾಗಿತ್ತು. ಟೆಂಡರ್ ವೇಳಾಪಟ್ಟಿಯಂತೆ ದಿನಾಂಕ:24.02.2023 ರಂದು ಪ್ರೀ ಬಿಡ್ ಸಭೆಯನ್ನು ಕರೆಯಲಾಯಿತು. ಸದರಿ ಸಭೆಯಲ್ಲಿ ಆಸಕ್ತ ಬಿಡ್ಡುದಾರರು ಭಾಗವಹಿಸಿದರೂ ಸಹ ನಿಗದಿಪಡಿಸಿರುವ ಅವಧಿಯಲ್ಲಿ ಯಾರೊಬ್ಬ ಬಿಡ್ಡುದಾರರು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ನಂತರ ಟೆಂಡರ್ ಪ್ರಕಟಣೆಯನ್ನು ಎರಡನೇ ಭಾರಿ ನೀಡಿ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಯಿತು. ಆದಾಗ್ಯೂ ಸಹ ಯಾರೊಬ್ಬ ಬಿಡ್ಡುದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲ. |

....2

| | | |
|---|---|---|
| | | ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ದಿನಾಂಕ:16.03.2023ರ ಪತ್ರದಲ್ಲಿ, ಸಂಭವನೀಯ ಬಿಡ್ಡುದಾರರು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಮತ್ತು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಸಡಿಲಿಕೆ/ ತಿದ್ದುಪಡಿ/ ಬದಲಾಣೆಗಳನ್ನು ಮಾಡಲು ಕೋರಿ ಸಲ್ಲಿಸಿದ ಮನವಿಗಳ ಕುರಿತು ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.<br>ದಿನಾಂಕ:19:08.2023ರಂದು ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಕಾರ್ಖಾನೆಗೆ ಸಾಲ ನೀಡಿರುವ ಬ್ಯಾಂಕುಗಳು ಅಂತಿಮವಾಗಿ ಎಷ್ಟು ಓಟಿ.ಎಸ್. ಮೊತ್ತಕ್ಕೆ ಒಪ್ಪುತ್ತವೆ ಎಂಬ ಬಗ್ಗೆ ಮಾಹಿತಿಯನ್ನು ಕಾರ್ಖಾನೆಯಿಂದ ಪಡೆದು ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು. ಅದರಂತೆ, ಕಾರ್ಖಾನೆಗೆ ಸಾಲ ನೀಡಿರುವ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಎಷ್ಟು ಓಟಿ.ಎಸ್ ಮೊತ್ತಕ್ಕೆ ಒಪ್ಪುತ್ತವೆ ಎಂಬ ಬಗ್ಗೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಕಾರ್ಖಾನೆಗೆ ಸೂಚಿಸಲಾಗಿತ್ತು.<br>ಕಾರ್ಖಾನೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಮಾಹಿತಿಯನ್ನು ಸಲ್ಲಿಸಿ, ಏಕಕಾಲಿಕ ತೀರುವಳಿ ಯೋಜನೆಯಡಿ ಬಡ್ಡಿಯನ್ನು ಬ್ಯಾಂಕ್‌ನವರಿಗೆ ಮನ್ನಾ ಮಾಡುವಂತೆ ಕೋರಲಾಗಿದ್ದರೂ ಬ್ಯಾಂಕ್‌ಗಳಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲವೆಂದು ತಿಳಿಸುತ್ತಾ, ಕಾರ್ಖಾನೆ ಹೊಂದಿರುವ ಬ್ಯಾಂಕುಗಳ ಸಾಲಗಳ ಮೇಲಿನ ಬಡ್ಡಿಯನ್ನು ಸರ್ಕಾರದ ಹಂತದಲ್ಲಿಯೇ ಮನ್ನಾ ಮಾಡುವಂತೆ ಹಾಗೂ ಕಬ್ಬು ಬೆಳೆಗಾರ ರೈತರು ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಲೀಸ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾರ್ಖಾನೆಯನ್ನು ಪುನರ್ ಆರಂಭಿಸುವಂತೆ ಕೋರಿದ್ದರು.<br>ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:10.09.2024ರ ಪತ್ರದಲ್ಲಿ, ಕಾರ್ಖಾನೆಯನ್ನು ಗುತ್ತಿಗೆ ಪಡೆಯುವ ಸಂಬಂಧ ಸಂಭವನೀಯ ಬಿಡ್ಡುದಾರರು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಹಾಗೂ ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ತಿದ್ದುಪಡಿ / ಬದಲಾವಣೆ ಮಾಡುವ ಬಗ್ಗೆ ಹಾಗೂ ಕಾರ್ಖಾನೆ ಹೊಂದಿರುವ ಹಣಕಾಸು ಸಂಸ್ಥೆಗಳ / ಬ್ಯಾಂಕುಗಳ ಸಾಲಗಳನ್ನು ಏಕಕಾಲಿಕ ತೀರುವಳಿ (ಓಟಿಎಸ್) ಯೋಜನೆಯಡಿಯಲ್ಲಿ ಮರುಪಾವತಿ ಮಾಡುವ ಬಗ್ಗೆ ಹಾಗೂ ಗುತ್ತಿಗೆ ನೀಡುವ ಮೂಲಕ ಪುನರ್ ಆರಂಭಿಸುವ ಬಗ್ಗೆ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.<br>ಏತನ್ಮಧ್ಯೆ ಈ ಕಾರ್ಖಾನೆಗೆ ನೀಡಿರುವ ಸಾಲಗಳು ಮರುಪಾವತಿಯಾಗದೇ ಸುಸ್ತಿಯಾಗಿರುವುದರಿಂದ ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರ ಅನುಮತಿಯ ಮೇಲೆ ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕಿನವರು SARFAESI Act 2002 (Securitisation and Reconstruction of Financial Assets and Enforcement of Security Interest Act) ರಡಿಯಲ್ಲಿ ದಿನಾಂಕ:16.12.2024ರಂದು ಕಾರ್ಖಾನೆಗೆ ಸೇರಿದ ಚರ ಹಾಗೂ ಸ್ಥಿರಾಸ್ತಿಗಳನ್ನು ಬಹಿರಂಗ ಹರಾಜು ಪ್ರಕ್ರಿಯೆಗೆ ಒಳಪಡಿಸಿದ್ದರು. ಸದರಿ ಹರಾಜಿನಲ್ಲಿ ರೂ.184.00 ಕೋಟಿಗಳಿಗೆ ಶ್ರೀಸುಭಾಷ ಗಂಗಾ ಹುಮನಾಬಾದ್ ಇವರಿಗೆ ಹರಾಜು ನೀಡಲಾಗಿರುತ್ತದೆ.<br>ಸರ್ಕಾರದ ಅನುಮತಿಯಿಲ್ಲದೆ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಹರಾಜು ಮಾಡಲು ಅನುಮತಿ ನೀಡಿದ ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆ ಇವರ ನಿರ್ಧಾರದ ವಿರುದ್ಧ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಸರ್ಕಾರಕ್ಕೆ ದೂರನ್ನು ದಾಖಲಿಸಿದ್ದರು. |

..3

ಈ ಹಿನ್ನೆಲೆಯಲ್ಲಿ ಮತ್ತು ಕಾರ್ಖಾನೆಯು ಹೊಂದಿರುವ ಎಲ್ಲಾ ಸಮಸ್ಯೆಗಳ ಕುರಿತಾಗಿ ಚರ್ಚಿಸಲು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:18.12.2024 ರಂದು ಸುವರ್ಣಸೌಧ, ಬೆಳಗಾವಿ ಇಲ್ಲಿ ಸಭೆಯನ್ನು ನಡೆಸಲಾಗಿತ್ತು. ಸದರಿ ಸಭೆಯ ನಿರ್ಣಯದಂತೆ, ಕಬ್ಬು ಬೆಳೆಯುವ ರೈತರು, ಕಾರ್ಮಿಕರು ಮತ್ತು ಇತರೆ ಹಣಕಾಸು ಸಂಸ್ಥೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬೀದರ್ ಡಿ.ಸಿ.ಸಿ ಬ್ಯಾಂಕ್ ಇವರು ಹೊರಡಿಸಿರುವ ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿತ್ತು.

ಅದರಂತೆ, ಬೀದರ್ ಡಿ.ಸಿ.ಸಿ ಬ್ಯಾಂಕ್ ಇವರು ಹೊರಡಿಸಿರುವ ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:10.01.2025ರ ಪತ್ರದಲ್ಲಿ ಸಹಕಾರ ಇಲಾಖೆಯನ್ನು ಕೋರಲಾಗಿರುತ್ತದೆ.

ಮುಂದುವರೆದು ಸದರಿ ಸಕ್ಕರೆ ಕಾರ್ಖಾನೆಯನ್ನು LROT ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಹಾಗೂ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಅರಣ್ಯ ಜೀವಶಾಸ್ತ್ರ ಮತ್ತು ಪರಿಸರ ಸಚಿವರು, ಮಾನ್ಯ ಸಹಕಾರ ಸಚಿವರು ಮತ್ತು ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉಪಸ್ಥಿತಿಯಲ್ಲಿ ದಿನಾಂಕ:26.06.2025 ರಂದು ನಡೆದ ಸಭೆಯಲ್ಲಿ ಸರ್ಕಾರದ ವತಿಯಿಂದ ಕಾರ್ಖಾನೆಗೆ ಆರ್ಥಿಕ ನೆರವನ್ನು ಪಡೆಯುವ ಕುರಿತು ತೀರ್ಮಾನಿಸಲಾಗಿರುತ್ತದೆ.

ಈ ಕಾರ್ಖಾನೆಯಲ್ಲಿ ಎಥನಾಲ್ ಘಟಕವನ್ನು ಮತ್ತು ಸಹ-ವಿದ್ಯುತ್ ಘಟಕವನ್ನು ಸ್ಥಾಪಿಸಲು ಹಾಗೂ ಹಾಲಿ ಇರುವ ಸಾಲಗಳ ಮರುಪಾವತಿಗಾಗಿ ರಾಜ್ಯ ಸರ್ಕಾರದ ಖಾತರಿ ಮೂಲಕ ರೂ.550.00 **ಕೋಟಿಗಳಷ್ಟು** ಆರ್ಥಿಕ ನೆರವು ನೀಡುವಂತೆ ಕೋರಿ ಸಾಲದ ಪ್ರಸ್ತಾವನೆಯನ್ನು ದಿನಾಂಕ:15.07.2025 ರಂದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (N.C.D.C) ನವದೆಹಲಿ ಇವರಿಗೆ ಸಲ್ಲಿಸಲಾಗಿತ್ತು. ಪತ್ರದ ಪ್ರತಿಯನ್ನು **ಅನುಬಂಧ-2 ರಲ್ಲಿ** ಒದಗಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ನವದೆಹಲಿ ಇವರ ದಿನಾಂಕ:06.08.2025ರ ಪತ್ರಗಳಲ್ಲಿ, ಬೀದರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಒಳಗೊಂಡಂತೆ ಒಟ್ಟು 06 ಸಹಕಾರಿ ಸಕ್ಕರೆ ಕಾರ್ಖಾನೆಗಳು ಎನ್.ಸಿ.ಡಿ.ಸಿ.ಯ ನೇರ ಹಣಕಾಸು ಮಾನದಂಡಗಳನ್ನು ಪೂರೈಸದ ಕಾರಣ, ಕರ್ನಾಟಕ ರಾಜ್ಯ ಸರ್ಕಾರವು, ಪ್ರಾಥಮಿಕ ಸಾಲಗಾರನಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆಗಳನ್ನು ಎನ್.ಸಿ.ಡಿ.ಸಿ.ಗೆ ಶಿಫಾರಸು ಮಾಡಬಹುದು ಎಂದು ಮತ್ತು ಅಂತಹ ಮೊತ್ತವನ್ನು ಸಂಬಂಧಿಸಿದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ವರ್ಗಾಯಿಸಬಹುದು ಎಂದು ತಿಳಿಸಿರುತ್ತಾರೆ. ಪತ್ರದ ಪ್ರತಿಯನ್ನು **ಅನುಬಂಧ-3 ರಲ್ಲಿ** ಒದಗಿಸಿದೆ. ಎನ್.ಸಿ.ಡಿ.ಸಿ.ಯ ಅಭಿಪ್ರಾಯದ ಕುರಿತು ಪರಿಶೀಲನೆಯನ್ನು ನಡೆಸಲಾಗುತ್ತಿದೆ.

| | | |
|---|---|---|
| (ಈ) | ಸಕ್ಕರೆ ಕಾರ್ಖಾನೆ ಯಾವಾಗ ಪ್ರಾರಂಭ ಮಾಡಲಾಗುವುದು? (ವಿವರವಾದ ಮಾಹಿತಿ ನೀಡುವುದು) | ಬೀದರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಕುರಿತು ಬೀದರ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರಸ್ತಾವನೆಯನ್ನು ಒಳಗೊಂಡಂತೆ ಒಟ್ಟು 06 ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಎನ್.ಸಿ.ಡಿ.ಸಿಯಿಂದ ನೆರವನ್ನು ಪಡೆಯುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆಯನ್ನು ನಡೆಸಲಾಗುವುದು. ಎನ್.ಸಿ.ಡಿ.ಸಿಯಿಂದ ಆರ್ಥಿಕ ನೆರವು ಲಭ್ಯವಾಗದಿದ್ದಲ್ಲಿ, ಬೀದರ್ ಎಸ್.ಎಸ್.ಕೆ. ಹುಮನಾಬಾದ್ ತಾಲ್ಲೂಕು, ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್ ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಕಾರ್ಖಾನೆಯನ್ನು ಎಲ್.ಆರ್.ಓ.ಟಿ ಆಧಾರದ ಮೇಲೆ ಇದ್ದಲ್ಲಿ ಇದ್ದಂತೆಯೇ ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡಲು ಮತ್ತೊಮ್ಮೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲು ಪರಿಶೀಲಿಸಲಾಗುವುದು. |

ಸಂಖ್ಯೆ: ಸಿಐ 44 ಎಸ್‌ಜಿಎಫ್ 2026

(ಶಿವಾನಂದ ಎಸ್ ಪಾಟೀಲ್)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ - 1

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ.

**ಓದಲಾಗಿದೆ:**
1. ದಿನಾಂಕ:24.12.2021ರಂದು ಜರುಗಿದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ 45ನೇ, 46ನೇ ಮತ್ತು 47ನೇ ವಾರ್ಷಿಕ ಮಹಾಸಭೆಯ ನಡವಳಿ.
2. ದಿನಾಂಕ:14.03.2022ರಂದು ಜರುಗಿದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ತುರ್ತು ಆಡಳಿತ ಮಂಡಳಿ ಸಭೆಯ ನಡವಳಿ.
3. ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ ಇವರ ಪತ್ರ ಸಂಖ್ಯೆ: ಬಿಸಸಕಾ/ಆಡಳಿತ/ಎಸ್-2/2022-23, ದಿನಾಂಕ:17.05.2022
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/50/2021-22/196, ದಿನಾಂಕ:25.05.2022.
5. ಸರ್ಕಾರದ ಆದೇಶ ಸಂಖ್ಯೆ: ಸಿಐ 107 ಸಿಓಎಫ್ 2022, ದಿನಾಂಕ:23.08.2022
6. ಸರ್ಕಾರದ ಪತ್ರ ಸಂಖ್ಯೆ: ಸಿಐ 107 ಸಿಓಎಫ್ 2022, ದಿನಾಂಕ:25.07.2022.
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/50/2021-22/776, ದಿನಾಂಕ:19.11.2022.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸಭಾ ನಡವಳಿಗಳಲ್ಲಿ, 2019-20 ಮತ್ತು 2020-21ನೇ ಹಂಗಾಮುಗಳಲ್ಲಿ ಕಬ್ಬು ಅರೆಯುವ ಕಾರ್ಯ ನಡೆಯದೇ ಇರುವುದರಿಂದ ಅನೇಕ ಯಂತ್ರೋಪಕರಣಗಳು ಹಾಗೂ ಪೈಪ್‌ಲೈನ್‌ಗಳು ತುಕ್ಕು ಹಿಡಿದು ಹಾಳಾಗಿದ್ದು, ಕಾರ್ಖಾನೆಗೆ ಪಡೆದಿರುವ ಎಲ್ಲಾ ಸಾಲಗಳು ಎನ್.ಪಿ.ಎ ಆಗಿದ್ದು, ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ತುಂಬಾ ಕ್ಲಿಷ್ಟಕರವಾಗಿರುವುದರಿಂದ ಕಬ್ಬು ಬೆಳೆಯುವ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಖಾಸಗಿಯವರಿಗೆ ದೀರ್ಘಾವಧಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರ ಪತ್ರದಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸುವ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ, ಕಬ್ಬು ಬೆಳೆಯುವ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡುವುದಕ್ಕೆ ಅನುಮತಿಯನ್ನು ನೀಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿನ ವಿವರಗಳು ಈ ಕೆಳಕಂಡಂತೆ ಇರುತ್ತವೆ;

I. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿ 1968-69ರಲ್ಲಿ ನೋಂದಣಿಗೊಂಡಿರುತ್ತದೆ.

II. ಸಹಕಾರಿ ವಲಯದ ಈ ಕಾರ್ಖಾನೆಯಲ್ಲಿ ರಾಜ್ಯ ಸರ್ಕಾರವು ರೂ.4.64 ಕೋಟಿಗಳ ಷೇರು ಬಂಡವಾಳವನ್ನು ಹೊಂದಿರುತ್ತದೆ.

III. ಈ ಕಾರ್ಖಾನೆಯಲ್ಲಿ 3500 ಟಿ.ಸಿ.ಡಿ. ಸಾಮರ್ಥ್ಯದ ಕಬ್ಬು ಅರೆಯುವ ಘಟಕವಿರುತ್ತದೆ ಹಾಗೂ ಸಹ - ವಿದ್ಯುತ್ ಮತ್ತು ಡಿಸ್ಟಲರಿ, ಎಥೆನಾಲ್ ಘಟಕಗಳು ಇರುವುದಿಲ್ಲ.

IV. ಕಾರ್ಖಾನೆಯು ಒಟ್ಟು 176 ಎಕರೆ ಜಮೀನನ್ನು ಹೊಂದಿರುತ್ತದೆ. ಕಾರ್ಖಾನೆಗೆ ಪಡೆದಿರುವ ಸಾಲಗಳಿಗೆ ಎಲ್ಲಾ ಸ್ಥಿರಾಸ್ತಿಗಳನ್ನು ಅಡಮಾನವಿರಿಸಲಾಗಿದೆ.

V. ಕಾರ್ಖಾನೆಯು 25,760 ಷೇರುದಾರರನ್ನು ಹೊಂದಿದ್ದು, ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ - 590 ಆಗಿರುತ್ತದೆ.

VI. ಕಾರ್ಖಾನೆಯು ಪ್ರಸ್ತುತ ಪಾವತಿಸಬೇಕಾದ ಸಾಲ ಮತ್ತು ಜವಾಬ್ದಾರಿಗಳ ಮೊತ್ತ ರೂ. 348.11 ಕೋಟಿಗಳ (ಅಸಲು + ಬಡ್ಡಿ) ಆಗಿರುತ್ತದೆ.

VII. 2021-22ನೇ ಹಂಗಾಮಿನಲ್ಲಿ ರೈತರ ಕಬ್ಬು ಬಿಲ್ಲು, ಕಬ್ಬು ಕಟಾವು ಮತ್ತು ಸಾಗಾಣಿಕೆ ಬಿಲ್ಲು, ಕಾರ್ಮಿಕರ ವೇತನ, ವಿದ್ಯುತ್ ಬಿಲ್ಲು ಮತ್ತು ಶಾಸನ ಬದ್ಧ ಬಾಕಿಗಳ ಮೊತ್ತ ರೂ.23.09 ಕೋಟಿಗಳನ್ನು ಪಾವತಿಸುವುದು ಬಾಕಿ ಇರುತ್ತದೆ. ಇದರಲ್ಲಿ ರೈತರ ಕಬ್ಬು ಬಿಲ್ಲು ಬಾಕಿ ರೂ.10.26 ಕೋಟಿಗಳಾಗಿರುತ್ತದೆ.

VIII. ದಿನಾಂಕ:31.03.2021ರ ಅಂತ್ಯಕ್ಕೆ ಕಾರ್ಖಾನೆಯ ಕ್ರೋಢೀಕೃತ ನಷ್ಟ ರೂ.290.00 ಕೋಟಿಗಳಾಗಿರುತ್ತದೆ.

IX. ಕಾರ್ಖಾನೆಯ Techno Commercial Viability ಬಗ್ಗೆ M/s. B Quest Techno Financial Consultancy and Service, LLP, Bengaluru ಇವರಿಂದ ಮೌಲ್ಯಮಾಪನ ಮಾಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮಾನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ – ಈ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಲು ಅವಶ್ಯವಿರುವ ರೂ.10.00 ಕೋಟಿಗಳ ಸಾಲವನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ಪಡೆದುಕೊಳ್ಳಲು ರಾಜ್ಯ ಸರ್ಕಾರದ ಖಾತರಿಯನ್ನು ನೀಡಲಾಗಿದೆ. ಇದರಿಂದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ಪ್ರಸ್ತುತ ಸಾಲ ಮತ್ತು ಜವಾಬ್ದಾರಿಗಳ ಮೊತ್ತ ರೂ.358.11 ಕೋಟಿಗಳಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ಕರಡು ಟೆಂಡರ್ ಡಾಕ್ಯುಮೆಂಟ್ ಅನ್ನು ಷರತ್ತುಗಳೊಂದಿಗೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ, ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಂದ ಸಿದ್ಧಪಡಿಸಲಾದ ಕರಡು ಟೆಂಡರ್ ಡಾಕ್ಯುಮೆಂಟ್ ಅನ್ನು ಪರಿಶೀಲಿಸಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು 2022-23ನೇ ಹಂಗಾಮಿನಿಂದ 2061-62ನೇ ಹಂಗಾಮಿನವರೆಗೆ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡುವ ಸಂಬಂಧ ಸೂಕ್ತ ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸಿ ಸರ್ಕಾರದ ಅನುಮೋದನೆಯನ್ನು ನೀಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ದೀರ್ಘಾವಧಿಗೆ ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ. ಇದುವರೆವಿಗೂ ಒಟ್ಟು 09 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಿ ಪುನಶ್ಚೇತನಗೊಳಿಸಲಾಗಿದೆ. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಹಣಕಾಸು ಸಂಸ್ಥೆಗಳು / ಬ್ಯಾಂಕುಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಖಾನೆಗೆ ದುಡಿಯುವ ಬಂಡವಾಳವನ್ನು ಕ್ರೋಢೀಕರಿಸುವುದು ಕಷ್ಟವಾಗುತ್ತಿದೆ. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವುದರಿಂದ, ಕಾರ್ಖಾನೆಯ ಸಾಲ ಮತ್ತು ಜವಾಬ್ದಾರಿಗಳನ್ನು ತೀರುವಳಿ ಮಾಡಲು, ಕಬ್ಬು ಬೆಳೆಯುವ ರೈತರ ಹಾಗೂ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು ಅನುಕೂಲವಾಗಲಿದೆ. ಇದು ಈ ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 107 ಸಿಓಎಫ್ 2022 (ಭಾಗ-3)**
**ಬೆಂಗಳೂರು, 10 ನೇ ಜನವರಿ 2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ- ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ 2022-23ನೇ ಹಂಗಾಮಿನಿಂದ 2061-62ನೇ ಹಂಗಾಮಿನವರೆಗೆ 40 ವರ್ಷಗಳ ಅವಧಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ "ಇದ್ದಲ್ಲಿ ಇದ್ದಂತೆಯೇ" ಖಾಸಗಿಯವರಿಗೆ ಗುತ್ತಿಗೆ ನೀಡಲು ಈ ಕೆಳಕಂಡ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಕಾರ್ಖಾನೆಯನ್ನು ಗುತ್ತಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ / ನಿಯಮಗಳನುಸಾರ/ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳನುಸಾರ ಟೆಂಡರ್ ಕರೆಯವುದು.
2. ಕಾರ್ಖಾನೆಯನ್ನು ಗುತ್ತಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಎರಡು ಲಕೋಟೆ ಪದ್ಧತಿಯಂತೆ ನಿರ್ವಹಿಸುವುದು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಹೆಚ್ಚು ಪ್ರಚಾರದಲ್ಲಿರುವ ಎರಡು ದಿನಪತ್ರಿಕೆ ( ಕನ್ನಡ ಮತ್ತು ಆಂಗ್ಲಭಾಷೆ) ಗಳಲ್ಲಿ ಪ್ರಕಟಣೆ ನೀಡತಕ್ಕದ್ದು.
3. ಕಾರ್ಖಾನೆಯು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.
4. ಟೆಂಡರ್‌ಗೆ ಅರ್ಜಿ ಸಲ್ಲಿಸುವ ಬಿಡ್ಡುದಾರರು ಸಲ್ಲಿಸುವ ಟೆಂಡರ್‌ಗೆ ರೂ.1.00 ಕೋಟಿಗಳ ಇ.ಎಂ.ಡಿ. ಮೊತ್ತವನ್ನು ನಿಗದಿಪಡಿಸತಕ್ಕದ್ದು.
5. ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಸಮಯದಲ್ಲಿ ನೀಡುವ ಭದ್ರತಾ ಠೇವಣಿ ಮೊತ್ತವನ್ನು ರೂ.5.00 ಕೋಟಿಗಳಿಗೆ ನಿಗದಿಗೊಳಿಸತಕ್ಕದ್ದು.
6. ಕಂಪನಿ ಅಥವಾ ಅದರ ಪಾಲುದಾರರು ಕನಿಷ್ಠ ರೂ.50.00 ಕೋಟಿಗಳ ಧನಾತ್ಮಕ ನಿವ್ವಳ ಮೌಲ್ಯವನ್ನು ಹೊಂದಿರಬೇಕು.
7. ಹಿಂದಿನ 3 ವರ್ಷಗಳಲ್ಲಿ ಬಿಡ್ಡುದಾರನ ಸರಾಸರಿ ವಾರ್ಷಿಕ ವಹಿವಾಟು ರೂ.200.00 ಕೋಟಿಗಿಂತ ಕಡಿಮೆಯಿರಬಾರದು. (2018-19 ರಿಂದ 2020-21).
8. ಟೆಂಡರ್ ಅನ್ನು ಅಂತಿಮಗೊಳಿಸಿದ ನಂತರದ ದಿನಾಂಕವನ್ನು ಆಧರಿಸಿ, ಕಾರ್ಖಾನೆಯನ್ನು ಗುತ್ತಿಗೆ ಪಡೆಯುವ ಗುತ್ತಿಗೆದಾರರು 2022-23 ಅಥವಾ 2023-24ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು.
9. ಬಿಡ್ಡುದಾರನು ಕನಿಷ್ಠ 05 ವರ್ಷಗಳ ಕಾಲ ಸಕ್ಕರೆ ಕಾರ್ಖಾನೆಯನ್ನು ಅಥವಾ ಡಿಸ್ಟಿಲರಿಯನ್ನು ಅಥವಾ ಸಹ-ವಿದ್ಯುತ್ ಘಟಕವನ್ನು ನಡೆಸಿರುವ ಅನುಭವವನ್ನು ಹೊಂದಿರತಕ್ಕದ್ದು ಅಥವಾ ಬಿಡ್ಡುದಾರನು ಸಕ್ಕರೆ ಕಾರ್ಖಾನೆಯನ್ನು ಸಮರ್ಥವಾಗಿ ನಡೆಸಲು ಬೇಕಾದ ಹಣಕಾಸಿನ ಭದ್ರತೆಯನ್ನು ಪ್ರಸ್ತುತಪಡಿಸುವುದು.
10. ಬಿಡ್ಡುದಾರನು ಹೂಡಿಕೆ ಯೋಜನೆಯನ್ನು ಅಂದರೆ, ಎಲ್.ಆರ್.ಓ.ಟಿ. ಆಧಾರದ ಮೇಲೆ ಕಾರ್ಖಾನೆಯನ್ನು ನಡೆಸಲು ಅಗತ್ಯವಾದ ಹಣಕಾಸು ಹೊಂದಿಸಿಕೊಳ್ಳುವ ಕುರಿತ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
11. ಬಿಡ್ ಸಲ್ಲಿಕೆ ದಿನಾಂಕದಂದು ಸಾರ್ವಜನಿಕ ಸ್ವಾಮ್ಯದ ಉದ್ಯಮಗಳು ಸೇರಿದಂತೆ ಯಾವುದೇ ಸರ್ಕಾರದಿಂದ ಬಿಡ್‌ದಾರರನ್ನು ಕಪ್ಪು ಪಟ್ಟಿಗೆ ಸೇರಿಸಬಾರದು.
12. ಕಾರ್ಯನಿರ್ವಹಣೆ ಮಾಡದ ಕಾರಣ ಬಿಡ್ಡುದಾರನು ಬಿಡ್ ಸಲ್ಲಿಕೆ ದಿನಾಂಕಕ್ಕೆ ಸಾರ್ವಜನಿಕ ಸ್ವಾಮ್ಯದ ಉದ್ಯಮಗಳನ್ನು ಒಳಗೊಂಡಂತೆ ಯಾವುದೇ ಸರ್ಕಾರಿ ಏಜೆನ್ಸಿಗಳಿಂದ ಡೀಫಾಲ್ಟ್ / ಶಾರ್ಟ್ ಕ್ಲೋಸ್ ಆಗಿರಬಾರದು.
13. ಯಶಸ್ವಿ ಬಿಡ್ಡುದಾರರಿಂದ ಸ್ವೀಕೃತಿಯಾಗುವ ನಿವ್ವಳ ಪ್ರಸ್ತುತ ಮೌಲ್ಯವು(ಎನ್.ಪಿ.ವಿ ರೂ.358.11 ಕೋಟಿಗಳನ್ನು ಮೀರತಕ್ಕದ್ದು. ಎನ್.ಪಿ.ವಿ ಲೆಕ್ಕಾಚಾರ ಮಾಡುವಾಗ. 10% ರಷ್ಟು ರಿಯಾಯಿತಿ ಅಂಶವನ್ನು(discounting factor) ಪರಿಗಣಿಸುವುದು.
14. ಜಮೀನು, ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು, ಕಾರ್ಖಾನೆಯ ಇತರ ಸಂಬಂಧಿತ ಉಪಕರಣಗಳು ಮತ್ತು ಕಾರ್ಖಾನೆಯ ಆಸ್ತಿಗಳನ್ನು ಯಾವುದೇ ಸಂದರ್ಭದಲ್ಲಿ ಗುತ್ತಿಗೆದಾರರು ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಥವಾ ಇತರರಿಗೆ ಅಡಮಾನ, ಉಪ-ಗುತ್ತಿಗೆ ಅಥವಾ ಬಾಡಿಗೆಗೆ ಅಥವಾ ಭದ್ರತೆಯಾಗಿ ನೀಡಲಾಗುವುದಿಲ್ಲ. ಆದಾಗ್ಯೂ, ಒಪ್ಪಂದದಲ್ಲಿ ಅವಕಾಶ ಕಲ್ಪಿಸಿದಂತೆ, ಗುತ್ತಿಗೆದಾರರು ಸ್ಥಾಪಿಸಿದ ಹೊಸ ಸ್ವತ್ತುಗಳ ಮೇಲೆ ಋಣಭಾರವನ್ನು ಸೃಷ್ಟಿಸಲು ಗುತ್ತಿಗೆದಾರನು ಅರ್ಹತೆಯನ್ನು ಹೊಂದಿರುತ್ತಾನೆ.
15. ಎಥೆನಾಲ್ ಘಟಕದೊಂದಿಗೆ ಸಹ–ವಿದ್ಯುತ್ ಘಟಕ ಮತ್ತು ಡಿಸ್ಟಿಲರಿಗಳ ಆಧುನೀಕರಣ, ವಿಸ್ತರಣೆ ಮತ್ತು ಸ್ಥಾಪನೆಗಾಗಿ ಖರೀದಿಸಿದ ಸ್ಥಾವರ ಮತ್ತು ಯಂತ್ರೋಪಕರಣಗಳು, ಉಪಕರಣಗಳು ಇತ್ಯಾದಿಗಳು ಹೊಸದಾಗಿರಬೇಕು ಮತ್ತು ಯಾವುದೇ ಬಳಸಿದ/ಸೆಕೆಂಡ್ ಹ್ಯಾಂಡ್ ಯಂತ್ರಗಳು ಮತ್ತು ಉಪಕರಣಗಳನ್ನು ಸ್ವೀಕರಿಸಲಾಗುವುದಿಲ್ಲ.

16. ವಾರ್ಷಿಕ ಗುತ್ತಿಗೆ ಬಾಡಿಗೆಯಿಂದ ಬರುವ ಮೊತ್ತವನ್ನು ಸರ್ಕಾರದ ಬಾಕಿ ಮತ್ತು ಇತರ ಬಾಕಿಗಳ ನಡುವೆ ಸರಿಸಮ (pari-passu) ಆಧಾರದ ಮೇಲೆ ಹಂಚಿಕೆ ಮಾಡತಕ್ಕದ್ದು (ಒಂದೇ ವರ್ಗದ ಬಾಕಿಗಳ ಸಂದರ್ಭದಲ್ಲಿ) ಮತ್ತು ಇತರ ಎಲ್ಲಾ ಬಾಕಿಗಳಿಗಿಂತ ತೆರಿಗೆ / ಶಾಸನಬದ್ಧ ಬಾಕಿಗಳನ್ನು ಪಾವತಿಸಲು ಆದ್ಯತೆ ನೀಡತಕ್ಕದ್ದು.
17. ಏಕವ್ಯಕ್ತಿ ಬಿಡ್ದುದಾರರು ಭಾಗಿಯಾದ ಸಂದರ್ಭದಲ್ಲಿ ಬಿಡ್‌ಅನ್ನು ಅಂತಿಮಗೊಳಿಸಲು ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
18. ಯಶಸ್ವಿ ಬಿಡ್ದುದಾರರು ಮತ್ತು ಕಾರ್ಖಾನೆಯ ನಡುವೆ ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರು ಪತ್ರಕ್ಕೆ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆದುಕೊಳ್ಳತಕ್ಕದ್ದು.
19. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಯಂತೆ ಹಾಗೂ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರ ಕಬ್ಬು ಬಿಲ್ಲನ್ನು ಸಕಾಲದಲ್ಲಿ ಪಾವತಿಸತಕ್ಕದ್ದು.
20. ಕಾರ್ಖಾನೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಡುವ ಗುತ್ತಿಗೆ ಕರಾರಿನಲ್ಲಿ ವಿಧಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಸಹ ಪಾಲಿಸತಕ್ಕದ್ದು.
21. ಕಾರ್ಖಾನೆಯು ಗುತ್ತಿಗೆದಾರರೊಂದಿಗೆ ಅಂತಿಮ ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ಒಪ್ಪಂದದ ದರ ಹಾಗೂ ಇತರೆ ಸಾಧಕ-ಬಾಧಕಗಳ ಬಗ್ಗೆ ಸರ್ಕಾರದ ಅನುಮೋದನೆ ಪಡೆದುಕೊಳ್ಳತಕ್ಕದ್ದು.
22. ಕಾರ್ಖಾನೆಯು ಮಾಡಿಕೊಳ್ಳುವ ಗುತ್ತಿಗೆ ಒಪ್ಪಂದದ ಕರಾರುಗಳಿಂದ ಸರ್ಕಾರದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಕ್ರಮವಹಿಸತಕ್ಕದ್ದು.
23. ಕಾರ್ಖಾನೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆಯನ್ನು ಯಶಸ್ವಿ ಬಿಡ್‌ದಾರರು ಮುಂದುವರಿಸಲು ಇಚ್ಛಿಸದೇ ಇದ್ದಲ್ಲಿ, ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ (ವಿ.ಆರ್.ಎಸ್.) ಜಾರಿಗೊಳಿಸುವ ಪೂರ್ವದಲ್ಲಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
24. ಗುತ್ತಿಗೆಯಿಂದ ಬರುವಂತಹ ಹಣದಿಂದ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಬ್ಯಾಂಕುಗಳ ಹಾಗೂ ಇತರೆ ಶಾಸನಬದ್ಧ ಬಾಕಿಗಳನ್ನು ಆದ್ಯತೆಯ ಮೇಲೆ ತೀರಿಸಲು ಕ್ರಮವಹಿಸತಕ್ಕದ್ದು.
25. ಕಾರ್ಖಾನೆಯನ್ನು ಗುತ್ತಿಗೆ ಪಡೆಯುವವರು ಗುತ್ತಿಗೆ ಅವಧಿ ಮುಗಿದ ನಂತರ ಯಾವುದೇ ರೀತಿಯ ಹೊಣೆಗಾರಿಕೆ / ಋಣಭಾರಗಳಿಲ್ಲದೆ ಕಾರ್ಖಾನೆಯನ್ನು ಆಡಳಿತ ಮಂಡಳಿಗೆ ವರ್ಗಾಯಿಸತಕ್ಕದ್ದು.
26. ಕಾರ್ಖಾನೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಡಬಹುದಾದ ಗುತ್ತಿಗೆ ಕರಾರಿನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳನ್ನು ಸಹ ಪಾಲಿಸತಕ್ಕದ್ದು.
27. ಕರಡು ಟೆಂಡರ್ ಡಾಕ್ಯುಮೆಂಟಿನಲ್ಲಿ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳನ್ನು ಯಥೋಚಿತವಾಗಿ ಅಳವಡಿಸುವುದು.

ಈ ಆದೇಶವನ್ನು ದಿನಾಂಕ:22.12.2022ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿನ ಕ್ರಮ ಸಂಖ್ಯೆ: 28(ಪ್ರಕರಣ ಸಂಖ್ಯೆ:ಸಿ-749/2022)ರಲ್ಲಿ ನೀಡಿರುವ ಅನುಮೋದನೆಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ) 10/1/23
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ (ಸಕ್ಕರೆ)

ಇವರಿಗೆ:- ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು (ಈ ಆದೇಶವನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 25 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ)

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001.
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೆಕ್, ಬೆಳಗಾವಿ-590009.
5. ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560001.
6. ನಿರ್ದೇಶಕರು (ತಾಂತ್ರಿಕ ಕೋಶ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ, ಆಸ್ತಿ ಮತ್ತು ಋಣ-ನಿರ್ವಹಣೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
8. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿ.ಟಿ.ಎಸ್.ನಂ:4125/1, ಬಿ.ಗಣೇಶಪುರ ರಸ್ತೆ, ಲಕ್ಷ್ಮಿಟೆಕ್, ಬೆಳಗಾವಿ-590009.
9. ಅಪರ ನಿರ್ದೇಶಕರು, (ನೀ&ಉ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49 ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.
11. ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
12. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
14. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ -1 ಮತ್ತು ಬಂ.ಹೂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-2 & 10), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
18. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
19. ಸರ್ಕಾರದ ಉಪ ಕಾರ್ಯದರ್ಶಿ (ಸಕ್ಕರೆ) ಯವರ ಪತ್ರಾಂಕಿತ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
20. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
21. ವ್ಯವಸ್ಥಾಪಕ ನಿರ್ದೇಶಕರು, ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್, ಹುಮನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ.
22. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಶ ಸು೨೦೫ - 2

GOVERNMENT OF KARNATAKA

No.CI 146 COF 2024

Karnataka Government Secretariat
Vikasa soudha,
Dr.B.R. Ambedkar Veedhi,
Bengaluru, Dated:14.07.2025

**From:**

The Secretary to Government
Commerce and Industries Department
(MSME & Mines)
Dr.B.R.Ambedkar veedhi,
Vikasa Soudha,
**BENGALURU-560 001.**

**To,**

The Managing Director
National Co-operative Development Corporation
No,4, Siri Industrial Area, Hauz Khas,
**NEW DELHI-110 016.**
e-mail id:mdncdc@ncdc.in
Tel:011-26510314

Commerce and Industries Department
Receipts and Issues section
Vikasa Soudha, Bangalore - 01
14/7/25

Sir,

**Sub:** Financial Assistance to The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District by the National Co-operative Development Corporation – reg.,

**Ref:**
1. Your Office D.O.letter No.NCDC:10-3/2015-Sugar/297,Dated 23.12.2024.
2. Managing Director, The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District, office Letter No:BSSK/Adm/S-1/Lease/2024-25, Dated:07.03.2025

******

With respect to the subject cited above and letter at ref.(1), proposal has been received from The Bidar Sahakara Sakkare Karkhane Niyamit, Hallikhed (S.F), Humanabad Taluk, Bidar District, vide letter at ref.(2) to the State Government seeking financial assistance under the "Grant in aid to NCDC for strengthening of the Co-operative Sugar Mills (CSMs)"

…..2

(a copy of the proposal is attached herewith). In the said proposal, The Bidar Cooperative Sugar Factory has requested the loan of Rs.550.00 crore for taking up the works setting up Ethanol plant and Co-generation plant to repay their existing loans. It has also proposed that the said loan of Rs.550.00 crores will be repaid from the income generated from the sale of electricity generated from the existing co-generation facility and other sources.

In the light of the above, the proposal of The Bidar Sahakar Sakkare Karkhane Niyamit, Hallikhed (S.F), Humanabad Taluk, Bidar District is forwarded here with for your consideration, for direct lending by NCDC to sugar factory, on merit and as per extant norms and guidelines. Government of Karnataka will provide the state government guarantee for the said amount sanctioned by NCDC.

While extending the credit, it shall be ensured that careful assessment of need-based requirement for the finance is made, in addition to compliance with other such internal/statutory norms including, *inter alia*, due-diligence, viability, repayment capacity of the borrowing entity and margin requirements. It should be noted that State Government guarantee being offered may not be taken as substitute for satisfactory credit appraisal.

It is also requested that a suitable escrow mechanism be put in place with all relevant stakeholders, for collection of funds / repayments, so that the same may be utilised towards servicing of the said loan.

Action taken in this regard, may kindly be communicated to this office also.

Yours faithfully,

**(SHANTHARAMA)**
Under Secretary to Government
Commerce and Industries Department (Sugar)

o/c

ಬೀದರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ,

ಹಳ್ಳಿಖೇಡ (ಸ.ಕಾ.) ತಾ॥ ಹುಮನಾಬಾದ ಜಿ॥ ಬೀದರ-585 415 ಕರ್ನಾಟಕ ರಾಜ್ಯ

# THE BIDAR SAHAKAR SAKKARE KARKHANE LTD.,

N/21-04-21

HALLIKED (S.F.), Tq. Humnabad Dist. Bidar-585 415 Karnataka State
Reg. No. 1903/RCS/1961, Email: bsskltd2012@gmail.com, web: bsskltdbidar.com
Ph.: 08483-274778, 274427, Mob.: 9035039652
GSTIN: 29AAAAB0378F1ZY

No.BSSK/Adm/S-1/Lease/2024-25/ Date 07-03-2025

To,
The Secretary,
Commerce & Industries,
Vikas Soudha,
BANGALORE-01.

Sir,

Sub:- Sanction of N.C.D.C Loan to the Bidar Sahakar Sakkare Karkhane Ltd, Hallikhed(SF), Tq. Humnabad, Dist. Bidar-reg.

****

With reference to the above cited subject, Bidar Sahakar Sakkare Karkhane Ltd, Hallikhed(SF) is an agro based Co-operative sugar factory of the Bidar District working from 1968 having 3500 TCD crushing capacity. The financial position of the karkhane is critical & for its modernization/re-habilitation loan is required at lesser interest. The karkhane is having bank loans as below:

(Rs. In crrores)

| Sl.No. | Name of the Banks | Principle loan | Interest | Total |
|---|---|---|---|---|
| 1) | DCC Bank Ltd, Bidar | 115.60 | 117.04 | 232.64 |
| 2) | Apex Bank Ltd, Bangalore | 44.16 | 66.36 | 110.52 |
| 3) | SBI Kalburgi | 7.67 | 6.00 | 13.67 |
| | TOTAL :- | 167.43 | 189.40 | 356.83 |

The Karkhane is having 173.35 acres land & all Bank loans have been N.P.A. We have written letters to the DCC Bank stating the lease process is under progress before the Government & order has been issued on 10-01-2023 & requested them to waive of the interest on loan under OTS scheme & we will pay the loan amount from the lease amount. But they have not considered our request till today. We have called lease tender on 17-02-2023 & 06-03-2023 twice, but no body has submitted tender. The Commissioner for Cane Development & Director of Sugar has written letters dated 16-10-2023 & 10-09-2024 to Govt. & recommended to consider for modifications of few terms & conditions & Bank loans under OTS scheme. Mean while the auction process of the karkhane property by DCC Bank has been discussed in the meeting dated 18-12-2024 held at Belagavi Suvarna Soudh under the Chairmanship of Hon'ble Minister for Textile, Cane Development & Sugar &

ಬೀದರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ,

THE BIDAR SAHAKAR SAKKARE KARKHANE LTD.,
HALLIKED (S.F.), Tq. Humnabad Dist. Bidar-585 415 Karnataka State
Reg. No. 1903/RCS/1961, Email: bsskltd2012@gmail.com, web: bsskltdbidar.com
Ph.: 08483-274778, 274427, Mob.: 9035039652
GSTIN: 29AAAAB0378F1ZY

N/21-04-21



Agricltural Marketing and in presence of Minister for Forest & Bidar District incharge Minister, Muncipal Administration Minister, All MLA/MLC of Bidar District, Ex. Minister, Secretary Commerce & Industries, Cane Commissioner & Director of Sugar, Deputy Commissioner, Bidar, Chairman, BSSK Ltd, & CEO of DCC Bank and resolved to held up the auction process and to give the Karkhane on lease on LROT basis & sent the meeting proceedings (copy enclosed).

Meanwhile from NCDC for co-operative sugar factories rehabilitation "Grant-in-Aid to NCDC for strengthening of the co-operative sugar mills (CSMS)" Scheme proposed for sanction of loan.

Therefore the loan from NCDC at lesser interest is helpful to the Bidar Sahakara Sakkare Karkhane Ltd,Hallikhed(SF) for its rehabilitation.

The karkhane is required loan amount of Rs. 350 crrores for settlement all Banks loan under OTS scheme, Rs. 200/- crores for Modernisation of the karkhane machineries & erection of Co-Gen. & ethenol plant i.e., totally Rs. 550/- crores.

In view of the above mentioned points our request may kindly be considered in the interest of Shares holders/employees to recommend for sanction & release of Rs. 550/- crores loan from NCDC to the Bidar Sahakara Sakkare Karkhane Ltd, Hallikhed(SF).

Thanking you,

Yours faithfully,

Managing Drector,
BSSK Ltd, Hallikhed(SF)

6 ಸಬ200 ಕ -3

राष्ट्रीय सहकारी विकास निगम
**NATIONAL COOPERATIVE DEVELOPMENT CORPORATION**
A Statutory Corporation Under the Ministry of Cooperation,
Government of India
**Sugar Division**

NCDC
*Assisting Cooperatives. Always!*

2025
**International Year of Cooperatives**
Cooperatives Build a Better World

Tel.No. 011-20862762 / 20862779
Fax : 011-26516032
E-mail: vkdubasi@ncdc.in

4-Siri Institutional Area,
Hauz Khas, New Delhi-110016 India
Website: www.ncdc.in

No. NCDC:7-1/2025-Sugar/164

Dated:06/08/2025

The Secretary,
Commerce and Industries Department
(MSME & Mines), Government of Karnataka,
Dr. B.R Ambedkar Veedhi
Vikasa Soudha ,
Bengaluru, Karnataka-560 001

**Sub: Proposal of The Bidar Sahakari Sakkare Karkhane Niyamit, Hallikhed, Karnataka for sanction of term loan of ₹550.00 crore to repay the existing loans & setting up of ethanol plant and co-generation plant under direct funding scheme of NCDC -Reg.**

Sir,

I am directed to refer to your letter No. CI 146 COF 2024 dated 14.07.2025 requesting for sanction of term loan of ₹550.00 crore to The Bidar Sahakari Sakkare Karkhane Niyamit, Hallikhed, Bidar District, Karnataka to repay the existing loans & setting up of ethanol plant and co-generation plant under direct funding scheme of NCDC against the Guarantee of Government of Karnataka as Security and to say that the proposal of the Society has been considered and it is observed that the society does not meet the criteria of NCDC direct funding guidelines for sanction of term loan of ₹550.00 crore.

2. In this connection, it is informed that as the society does not fulfil NCDC direct funding criteria, the State Government of Karnataka may recommend the proposal of The Bidar Sahakari Sakkare Karkhane Niyamit, Hallikhed, Bidar District, Karnataka to NCDC for borrowing funds by the State Government as primary borrower and further pass on the same to the above Cooperative Sugar Mill.

DS(S)

भवदीय

(वी के दुबासी)
निदेशक (चीनी)

Copy to:

1) The Bidar Sahakari Sakkare Karkhane Niyamit, Hallikhed, Karnataka- For information.

2) The Regional Director, NCDC, Bengaluru – with a request to follow up with the Government of Karnataka

Signature Not Verified
This document is digitally signed by Vamshi Krishna Dubasi, Director, NCDC on 06-Aug-2025 12:09